ಬೇಟಗಾರನಂತಹ ಖದೀಮ ಕಾಲ ಇದು. ಕಾಲವೆಂಬವನ ಅಸಾಧ್ಯ ಆಟಗಳ ಈ ಕಾಲದಲ್ಲಿ ಕತೆ ಹೇಳುವುದೂ, ಬರೆಯುವುದೂ, ಕತೆಯನ್ನು ಆಲಿಸುವವರ ಕಣ್ಣಮಿಂಚಿಗೆ ಕಾಯುವುದೂ, ಓದುಗನ ಪುಳಕಗಳ ನೆನೆದು ರೋಮಾಂಚಿತನಾಗುವುದು ಈ ಎಲ್ಲವೂ ನನಗಂತೂ ಕೃತಕ ಅನ್ನಿಸಲು ತೊಡಗಿದೆ. ಇದನ್ನೆಲ್ಲ ಹೆಚ್ಚು ವಿವರಿಸಲು ಹೋಗದೆ ಗುಣ ಪಡಿಸಲಾಗದ ಕಾಯಿಲೆಯಂತಾಗಿ ಹೋಗಿದ್ದ ಕತೆ ಹೇಳುವ ನನ್ನ ಬಾಲ್ಯದ ದಿನಗಳ ಮನೋಹರವೂ ದುರಂತಪೂರ್ವಕವೂ ಆದ ವೃತ್ತಾಂತವೊಂದನ್ನು ನಿಮ್ಮ ಜೊತೆಗೆ ಹಂಚಿಕೊಳ್ಳುವೆ. ನಾನು ಹೋದ ಮೇಲೂ ನನ್ನೊಳಗೆ ಮಣ್ಣಲ್ಲಿ ಮಣ್ಣಾಗಿ ಇದು ಉಳಿದುಕೊಳ್ಳಲಿ ಎಂದು ನಾನು ಬೇಡಿಕೊಳ್ಳುವ ವೃತ್ತಾಂತ ಇದು. ಒಂದು ಅನೂಹ್ಯ ಮಿಂಚಿನಂತೆ, ಒಂದು ಅಸಾಧ್ಯ ನೋವಿನಂತೆ ಇದು ಯಾವಾಗಲೂ ನನ್ನನ್ನು ಇರಿಯುವುದು. ಹೆಚ್ಚು ಭಾವುಕನಾಗದೆ, ಹೆಚ್ಚು ವಿವರಿಸಲು ಹೋಗದೆ ಇದನ್ನು ಹೇಳಲು ತೊಡಗುವೆನು.

ನನಗೆ ನೆನಪಿರುವಂತೆ ಸಣ್ಣದಿರುವಾಗ ನಾನು ಹೇಳುವ ಕತೆಗಳನ್ನು ಕೇಳಲೆಂದೇ ನನ್ನ ತಮ್ಮ ತಂಗಿಯರು ಅವರ ನಡುವೆ ನನ್ನನ್ನು ಮಲಗಿಸಿಕೊಳ್ಳುತ್ತಿದ್ದರು. ಜೊತೆಗೆ ಪಕ್ಕದ ಮನೆಯ ಸುಂದರಿಯಾಗಿದ್ದ ಹುಡುಗಿಯೊಬ್ಬಳೂ ಅವರ ನಡುವೆ ಜಾಗ ಮಾಡಿಕೊಂಡು ನನ್ನನ್ನು ಒತ್ತರಿಸಿಕೊಂಡು ಮಲಗಿರುತ್ತಿದ್ದಳು. ಜೊತೆಗೆ ಸಣ್ಣ ವಯಸ್ಸಿನ ನನ್ನ ತಾಯಿಯೂ ಮಲಗಿರುತ್ತಿದ್ದಳು. ಅವರೆಲ್ಲರನ್ನೂ ಏಕಕಾಲಕ್ಕೆ ಒಂದು ಕತೆಯ ಮೂಲಕ ಮೆಚ್ಚಿಸುವುದು ನನ್ನ ಆ ಇರುಳುಗಳ ಬಹಳ ದೊಡ್ಡ ಕಲೆಗಾರಿಕೆಯಾಗಿತ್ತು. ತಾಯಿಗೂ ಮಗನ ಮೇಲೆ ಮೆಚ್ಚುಗೆಯಾಗಬೇಕು, ತಮ್ಮ ತಂಗಿಯಂದಿರಿಗೂ ಪುಟ್ಟ ಅಣ್ಣನ ಮೇಲೆ ಅಭಿಮಾನ ಬರಬೇಕು, ಜೊತೆಗೆ ಪಕ್ಕದಲ್ಲಿ ಮಲಗಿದ್ದ ನನಗಿಂತ ಕೊಂಚ ದೊಡ್ಡವಳಾಗಿದ್ದ ಆ ಬಾಲಕಿಯೂ ನನ್ನ ಅನುರಾಗದಲ್ಲಿ ಬೀಳಬೇಕು ಎಂದು ಇರುವ ಒಂದು ಕತೆಯಲ್ಲೇ ಎರಡು ಮೂರು ಉದ್ದೇಶಗಳನ್ನು ಇಟ್ಟುಕೊಂಡು ಹೇಳುತ್ತಿದ್ದೆ. ಸಣ್ಣಪುಟ್ಟ ತಿರುವುಗಳು, ದೊಡ್ಡದಾದ ಘಟನೆಗಳು, ಕಣ್ಣೀರು ಬರಿಸುವಂತಹ ಅಂತ್ಯಗಳು, ನಡುನಡುವೆ ಸಂಭವಿಸುವ ತಮಾಷೆಗಳು, ಕುಹಕಗಳು ಮತ್ತು ಮಾನವ ಸಹಜ ಮಲಬಾಧೆ, ಮೂತ್ರಶಂಕೆ, ಹಸಿವು ಇತ್ಯಾದಿ ಮಾನವ ಸಹಜ ವಿದ್ಯಮಾನಗಳು ಇವೆಲ್ಲವನ್ನೂ ಹೇಳುತ್ತ ಹೇಳುತ್ತಲೇ ನಾನು ಆ ಹುಡುಗಿಯ ಅನುರಾಗಕ್ಕಾಗಿ ಕಾತರಿಸುತ್ತಿದ್ದೆ. ಕತೆ ಕೇಳುತ್ತ ಕಣ್ಣೀರುಗರೆಯುತ್ತಿದ್ದ ಆಕೆಯ ಕಣ್ಣೀರನ್ನು ಆ ಕತ್ತಲೆಯಲ್ಲಿಯೇ ಒರೆಸುವುದು, ಅವಳ ಬೆರಳಲ್ಲಿದ್ದ ತಂಗೀಸಿನ ಉಂಗುರವನ್ನು ಮೆಲ್ಲಗೆ ಕಳಚಿ ನನ್ನ ಬೆರಳಿಗೆ ಬದಲಿಸಿಕೊಳ್ಳುವುದು, ಮತ್ತೆ ಅವಳ ಬೆರಳಿಗೆ ತೊಡಿಸುವುದು, ಭಯಗೊಂಡಿರಬಹುದಾದ ಅವಳ ತೋಳುಗಳಿಗೆ ಆ ಕತ್ತಲೆಯಲ್ಲಿಯೇ ನನ್ನ ಕೆನ್ನೆಗಳನ್ನು ಸೋಕಿಸಿ ಅವಳ ಭಯ ಹೋಗಿರಬಹುದೆಂದು ಭ್ರಮಿಸುವುದು ಹೀಗೆ ಅವರೆಲ್ಲರೂ ಕತೆ ಕೇಳುತ್ತ ಕೇಳುತ್ತ ಅವರವರ ಲೋಕದೊಳಕ್ಕೆ ನಿದ್ದೆ ಹೋದಮೇಲೆ ಉಳಿದ ನನ್ನ ಒಂಟಿತನವನ್ನು ಹೇಗೆ ನೀಗಿಕೊಳ್ಳುವುದು ಎಂದು ಯೋಚಿಸುತ್ತಾ ನನಗೂ ತುಂಬ ಹೊತ್ತಿನ ನಂತರ ನಿದ್ದೆ ಬಂದು ಬಿಡುತ್ತಿತ್ತು.

ಆ ವಯಸ್ಸಿನಲ್ಲಿ ನಾನು ಈಗಿರುವುದಕ್ಕಿಂತಲೂ ಕೆಟ್ಟ ಹುಡುಗನಾಗಿದ್ದೆ. ಬಹಳ ಕತೆಗಳನ್ನು ಓದುತ್ತಿದ್ದೆ ಮತ್ತು ಕದ್ದು ಸಿನಿಮಾ ನೋಡುತ್ತಿದ್ದೆ. ಆಗ ನಮ್ಮ ಊರಿಗೆ ಹತ್ತಿರವಿದ್ದ ಸುಳ್ಯ ಪೇಟೆಯಲ್ಲಿ ಎರಡು ಸಿನಿಮಾ ಥಿಯೇಟರುಗಳಿದ್ದವು ಮತ್ತು ಆಗಲೇ ನನ್ನ ಬಳಿಯಲ್ಲಿ ಹಣ ಓಡಾಡುತ್ತಿತ್ತು. ಆ ವಯಸ್ಸಲ್ಲೇ ನಾನು ನಮ್ಮದೇ ತೋಟದಿಂದ ಗೇರುಬೀಜವನ್ನೂ, ಕರಿಮೆಣಸನ್ನೂ ಸ್ವಲ್ಪ ಸ್ವಲ್ಪ ಕದ್ದು ಅಡಗಿಸಿಟ್ಟು ಅವುಗಳನ್ನು ಅರ್ಧ ಬೆಲೆಗೆ ಮಾರಿ ಆ ಹಣವನ್ನು